**ಕರ್ನಾಟಕ ಸರ್ಕಾರ**

**ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ**

ಸಂ: ಕಾಬಾಅನಿ/ಇತರೆ/ಸಿಆರ್- 15 /2019-20

ನಿರ್ದೇಶಕರ ಕಛೇರಿ, ಕಲ್ಯಾಣ-ಸುರಕ್ಷಾ ಭವನ,
2ನೇ ಮಹಡಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29,
ದಿನಾಂಕ: 07-01-2020

**ಕಛೇರಿ ಜ್ಞಾಪನಾ**

**ವಿಷಯ**: ಅಪಾಯಕಾರಿ ಕಾರ್ಯಚಟುವಟಿಕೆಗಳಲ್ಲಿ ನಿರತರಾಗಿರುವ ಕಾರ್ಮಿಕರ ಆರೋಗ್ಯ ಸ್ಥಿತಿಗತಿ ಪರಿಶೀಲನೆ ಮತ್ತು ಉತ್ತಮಪಡಿಸುವ ಕುರಿತು

------

ರಾಜ್ಯದಲ್ಲಿ 1000 ಕ್ಕೂ ಹೆಚ್ಚು ಅಪಾಯಕಾರಿ ಕಾರ್ಯಾಚರಣೆ ಇರುವ ಕಾರ್ಖಾನೆಗಳನ್ನು ಇಲಾಖೆಯಿಂದ ಗುರುತಿಸಲಾಗಿದೆ. ಇಂತಹ ಕಾರ್ಯಚಟುವಟಿಕೆಗಳಲ್ಲಿ ನಿರತರಾಗಿರುವ ಕಾರ್ಮಿಕರ ಆರೋಗ್ಯದ ಸ್ಥಿತಿಗತಿಗಳನ್ನು ಪರಿಶೀಲನೆ ನಡೆಸುವುದು, ಔದ್ಯೋಗಿಕ ಖಾಯಿಲೆಗಳನ್ನು ಗುರುತಿಸುವುದು ಮತ್ತು ಅವುಗಳು ಪುನರಾವರ್ತನೆಯಾಗದಂತೆ ಕೆಲಸದ ವಾತಾವರಣವನ್ನು ಉತ್ತಮಪಡಿಸುವುದು ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಇಲಾಖೆಯ ಕಾರ್ಯಚಟುವಟಿಕೆಗಳನ್ನು ಈ ದೃಷ್ಟಿಕೋನದಲ್ಲಿ ಕೇಂದ್ರೀಕರಿಸಿ ಕಾರ್ಯನಿರ್ವಹಿಸಲು ಅನುವಾಗುವಂತೆ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ..

1) ರಾಜ್ಯದಲ್ಲಿ ಕಾರ್ಖಾನೆಗಳ ತಪಾಸಣಾ ವ್ಯವಸ್ಥೆಯನ್ನು Risk Based, Computerised Random Inspection System ಮೂಲಕ ನಡೆಸುವ ವ್ಯವಸ್ಥೆ ಜಾರಿಯಲ್ಲಿರುತ್ತದೆ. ವ್ಯವಹಾರ ಸರಳೀಕರಣ ಮಾರ್ಗಸೂಚಿಗಳನ್ವಯ ಪರಿವೀಕ್ಷಣಾಧಿಕಾರಿಗಳು ಪದೇ ಪದೇ ಕಾರ್ಖಾನೆಗೆ ಭೇಟಿ ನೀಡುವ ಪದ್ಧತಿಯನ್ನು ನಿರ್ಬಂಧಿಸುವ ಮತ್ತು ಇಲಾಖೆಯ ವಿವಿಧ ಶ್ರೇಣಿಯ ಅಧಿಕಾರಿಗಳು ಪ್ರತ್ಯೇಕವಾಗಿ ಪರಿವೀಕ್ಷಣೆ ನಡೆಸದಂತೆ ಹಾಗೂ ಕಾರ್ಮಿಕ ಇಲಾಖೆ / ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳೊಂದಿಗೆ ಜಂಟಿ ಪರಿವೀಕ್ಷಣೆ ನಡೆಸುವಂತೆ ನಿರ್ದೇಶನಗಳು ಇರುತ್ತವೆ.

2) ಇಲಾಖೆಯಲ್ಲಿ ಕಾರ್ಖಾನೆಗಳ ವಿಭಾಗದ ಕ್ಷೇತ್ರಾಧಿಕಾರಿಗಳು ಪರಿವೀಕ್ಷಣೆಗಳನ್ನು ನಡೆಸುತ್ತಿದ್ದು, ಕಾರ್ಖಾನೆಗಳ ಜಂಟಿ ನಿರ್ದೇಶಕರು (ವೈದ್ಯಕೀಯ) ಮತ್ತು ಔದ್ಯೋಗಿಕ ಆರೋಗ್ಯ ತಜ್ಞರು, ಸಹ ಪ್ರತ್ಯೇಕವಾಗಿ ಪರಿವೀಕ್ಷಣೆಯನ್ನು ನಡೆಸುತ್ತಿರುವುದು ಮೇಲೆ ತಿಳಿಸಿದ ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿರುತ್ತದೆ.

3) ರಾಜ್ಯದಲ್ಲಿ 1000 ಕ್ಕೂ ಹೆಚ್ಚು ಅಪಾಯಕಾರಿ ಕಾರ್ಯಾಚರಣೆ ಇರುವ ಕಾರ್ಖಾನೆಗಳನ್ನು ಇಲಾಖೆಯಿಂದ ಗುರುತಿಸಿದ್ದು, ಅವುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ ಆರೋಗ್ಯದ ಸ್ಥಿತಿಗತಿ ಕುರಿತಂತೆ ಇಲಾಖೆಯಲ್ಲಿ ಸ್ಪಷ್ಟವಾದ ದಾಖಲೆ / ಮಾಹಿತಿ ಇರುವುದಿಲ್ಲ. ಕಾರ್ಮಿಕರು ಈಡಾಗುವ ಔದ್ಯೋಗಿಕ ಖಾಯಿಲೆಗಳನ್ನು ಗುರುತಿಸುವ, ನಿವಾರಿಸುವ ಕುರಿತಂತೆ ಮತ್ತು ಸರ್ಟಿಫೈಯಿಂಗ್ ಸರ್ಜನ್ ರವರು ಕಾರ್ಖಾನೆಗೆ ಭೇಟಿ ನೀಡಿ ಕಾರ್ಮಿಕರನ್ನು ಸ್ವತ: ತಪಾಸಣೆಗೆ ಒಳಪಡಿಸಿ ಫಿಟ್‌ನೆಸ್ ಸರ್ಟಿಫಿಕೇಟ್ ನೀಡುವ ಕುರಿತಂತೆ ಕ್ರಮಗಳು ಇರುವುದಿಲ್ಲ.

4) ವೈದ್ಯಕೀಯ ತಪಾಸಣೆಯನ್ನು ಸ್ವತ: ನಡೆಸದೇ ಆಡಳಿತ ವರ್ಗದವರು ಖಾಸಗೀ ಸಂಸ್ಥೆಗಳಿಂದ ವೈದ್ಯಕೀಯ ತಪಾಸಣೆ ನಡೆಸಿದ ವಿವರಗಳನ್ನು ನಮೂನೆ-16 ರಲ್ಲಿ ನಮೂದಿಸಿ ಸಲ್ಲಿಸುವ ವರದಿಗಳಿಗೆ ಮೇಲ್ಸಹಿ ಮಾಡಿ ಪ್ರತಿ ಕಾರ್ಮಿಕರಿಗೆ ನಿಗಧಿಪಡಿಸಿದ ಶುಲ್ಕವನ್ನು ಇಲಾಖೆಗೆ ಪಡೆಯುವ ವ್ಯವಸ್ಥೆ ರೂಢಿಯಲ್ಲಿರುತ್ತದೆ. ಈ ಕುರಿತು ಕಾರ್ಖಾನೆಗಳ ಆಡಳಿತ ವರ್ಗದವರಿಂದ ಆಕ್ಷೇಪಣೆಗಳು ಇರುತ್ತವೆ.

5) ಕಾರ್ಖಾನೆಗಳ ಕಾಯ್ದೆ, 1948ರ ಸೆಕ್ಷನ್ 10 ಮತ್ತು ಕರ್ನಾಟಕ ಕಾರ್ಖಾನೆಗಳ ನಿಯಮಾವಳಿಗಳು, 1969 ನಿಯಮ 15 ರಡಿಯಲ್ಲಿ ಸರ್ಟಿಫೈಯಿಂಗ್ ಸರ್ಜನ್‌ಗಳು ನಿರ್ವಹಿಸಬೇಕಾದ ಕರ್ತವ್ಯ/ಜವಾಬ್ದಾರಿಗಳನ್ನು ಸ್ಪಷ್ಟವಾಗಿ ತಿಳಿಸಲಾಗಿದೆ.

6) ಮೇಲೆ ತಿಳಿಸಿದ ಅಂಶಗಳ ಹಿನ್ನಲೆಯಲ್ಲಿ ಕಾರ್ಖಾನೆಗಳ ಜಂಟಿ ನಿರ್ದೇಶಕರು (ವೈದ್ಯಕೀಯ) ಮತ್ತು ಔದ್ಯೋಗಿಕ ಆರೋಗ್ಯ ತಜ್ಞರವರ ಸೇವೆಯನ್ನು ಸಾರ್ವಜನಿಕ ಹಿತಾಸಕ್ತಿ ಅನುಗುಣವಾಗಿ, ಕಾರ್ಮಿಕರ ಆರೋಗ್ಯ ಸ್ಥಿತಿಗತಿಗಳನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಸಮರ್ಪಕವಾಗಿ ಉಪಯೋಗಿಸುವ ಅವಶ್ಯಕತೆ ಇರುತ್ತದೆ.

ಆದ್ದರಿಂದ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ.

ಅ) ವ್ಯವಹಾರ ಸರಳೀಕರಣ ಮಾರ್ಗಸೂಚಿಗಳನ್ವಯ *ಕಾರ್ಖಾನೆ*ಗಳ ಜಂಟಿ ನಿರ್ದೇಶಕರು (ವೈದ್ಯಕೀಯ) / ಔದ್ಯೋಗಿಕ ಆರೋಗ್ಯ ತಜ್ಞರು ರವರು ಪ್ರತ್ಯೇಕವಾಗಿ ಕಾರ್ಖಾನೆಗೆ ಭೇಟಿ ನೀಡಿ ತಪಾಸಣೆ ನಡೆಸುವ ಬದಲು ಸಂಬಂಧಪಟ್ಟ ವಿಭಾಗೀಯ ಕ್ಷೇತ್ರಾಧಿಕಾರಿಗಳ ಜೊತೆಯಲ್ಲಿ ಮಾತ್ರ ಕಾಯ್ದೆ ಮತ್ತು ನಿಯಮಗಳಲ್ಲಿ ಇರುವ ನಿಬಂಧನೆಗಳನ್ವಯ ತಪಾಸಣೆಗಳನ್ನು ನಡೆಸತಕ್ಕದ್ದು.

ಆ) ರಾಜ್ಯದಲ್ಲಿ 1000 ಕ್ಕೂ ಹೆಚ್ಚು ಅಪಾಯಕಾರಿ ಕಾರ್ಯಾಚರಣೆ ಇರುವ ಕಾರ್ಖಾನೆಗಳನ್ನು ಇಲಾಖೆಯಿಂದ ಗುರುತಿಸಿದ್ದು, ಸದರಿ ಅಪಾಯಕಾರಿ ಕಾರ್ಯಚಟುವಟಿಕೆಗಳಲ್ಲಿ ನಿರತರಾಗಿರುವ ಕಾರ್ಮಿಕರ ಆರೋಗ್ಯದ ಸ್ಥಿತಿಗತಿಗಳನ್ನು, ಔದ್ಯೋಗಿಕ ಖಾಯಿಲೆಗಳನ್ನು ಗುರುತಿಸುವ ಕುರಿತಂತೆ ಸಂಬಂಧಪಟ್ಟ ಕ್ಷೇತ್ರಾಧಿಕಾರಿಗಳ ಜೊತೆ ಭೇಟಿ ನೀಡಿ ಸ್ವತ: ಕಾರ್ಮಿಕರ ತಪಾಸಣೆ ನಡೆಸಿ ನಿಯಮಾನುಸಾರ ಫಿಟ್‌ನೆಸ್ ಸರ್ಟಿಫಿಕೇಟ್ ನೀಡುವುದು.

ಇ) ಕೆಲವು ಕಾರ್ಮಿಕರಿಗೆ ನಿಯಮಾನುಸಾರ ನಿರ್ದಿಷ್ಟವಾದ ವೈದ್ಯಕೀಯ ತಪಾಸಣೆ ನಡೆಸುವ ಅವಶ್ಯವಿದ್ದಲ್ಲಿ ಅಂತಹ ತಪಾಸಣೆಯನ್ನು ನಡೆಸಲು ಆಡಳಿತ ವರ್ಗದವರಿಗೆ ಭೇಟಿಯ ಸಂದರ್ಭದಲ್ಲಿ ಲಿಖಿತವಾಗಿ ಸೂಚಿಸುವುದು

ಈ) ಆಡಳಿತ ವರ್ಗದವರು ವೈದ್ಯಕೀಯ ತಪಾಸಣೆ ನಡೆಸಿದ ನಂತರ ಪುನ: ಕಾರ್ಖಾನೆಗೆ ಭೇಟಿ ನೀಡಿ ವೈದ್ಯಕೀಯ ತಪಾಸಣಾ ವಿವರಗಳನ್ನು ಮತ್ತು ಸಂಬಂಧಪಟ್ಟ ಕಾರ್ಮಿಕರನ್ನು ಮೊಕ್ತ ಪರಿಶೀಲಿಸಿ ಫಿಟ್‌ನೆಸ್ ಸರ್ಟಿಫಿಕೇಟ್ ನೀಡುವ ಕುರಿತಂತೆ ಮತ್ತು ನಮೂನೆ-16 ರಲ್ಲಿ ಮಾಹಿತಿಯನ್ನು ನಮೂದಿಸಿ ಸಹಿ ಮಾಡುವುದು.

ಉ) ಅಪಾಯಕಾರಿ ಕಾರ್ಖಾನೆಗೆ ಭೇಟಿ ನೀಡಿದಾಗ ಸ್ವತ: ತಪಾಸಣೆಗೊಳಪಡಿಸಿದ ಎಲ್ಲಾ ಕಾರ್ಮಿಕರ ವಿವರಗಳನ್ನು ಸ್ಪಷ್ಟವಾಗಿ ನಮೂದಿಸುವುದು. ಈ ಬಗ್ಗೆ ನಿಯಮಾನುಸಾರ ಅನ್ವಯವಾಗುವ ನಮೂನೆ-4, ನಮೂನೆ-16, ನಮೂನೆ-24 ನಮೂನೆ-26, ನಮೂನೆ-27, ನಮೂನೆ-37 ಮತ್ತು ನಮೂನೆ-38 ಗಳಲ್ಲಿ ವಿವರಗಳನ್ನು ಭರ್ತಿ ಮಾಡಿ ನಿರ್ವಹಿಸುವುದು. ಒಂದು ಪ್ರತಿಯನ್ನು ಕಾರ್ಖಾನೆಗೆ, ಮತ್ತೊಂದು ಪ್ರತಿಯನ್ನು ದಿನಚರಿಯೊಂದಿಗೆ ಮೇಲಾಧಿಕಾರಿಗಳ ಅನುಮೋದನೆಗೆ ಸಲ್ಲಿಸುವುದು.

ಊ) ಅಪಾಯಕಾರಿ ಕಾರ್ಖಾನೆಗಳಿಗೆ ಭೇಟಿ ನೀಡಿ ಕಾರ್ಮಿಕರನ್ನು ಸ್ವತ: ಪರಿಶೀಲಿಸಿದ ಕುರಿತಂತೆ ಎಲ್ಲಾ ವಿವರಗಳನ್ನೊಳಗೊಂಡಂತೆ ಡೇಟಾಬೇಸ್ ಅನ್ನು ಕಂಪ್ಯೂಟರ್‌ನಲ್ಲಿ ನಿರ್ವಹಿಸಿ ಮೇಲಾಧಿಕಾರಿಗಳ ಪರಿಶೀಲನಗೆ ಸಲ್ಲಿಸುವುದು.

ಋ) ಅಪಾಯಕಾರಿ ಕಾರ್ಖಾನೆಗಳಿಗೆ *ಕಾರ್ಖಾನೆಗಳ* ಜಂಟಿ ನಿರ್ದೇಶಕರು (ವೈದ್ಯಕೀಯ) / ಔದ್ಯೋಗಿಕ ಆರೋಗ್ಯ ತಜ್ಞರು ಭೇಟಿ ನೀಡಿ ಕಾರ್ಮಿಕರನ್ನು ಸ್ವತ: ಪರಿಶೀಲಿಸಿದ ನಂತರ ಫಿಟ್‌ನೆಸ್ ಸರ್ಟಿಫಿಕೇಟ್ ನೀಡುವ ಮತ್ತು ನಮೂನೆ-16 ರಲ್ಲಿ ನಮೂದಿಸುವ ಪ್ರತಿ ಕಾರ್ಮಿಕರಿಗೆ ಸಂಬಂಧಿಸಿದಂತೆ ಮಾತ್ರ ನಿಯಮಾನುಸಾರ ನಿಗಧಿಪಡಿಸಿರುವ ಶುಲ್ಕವನ್ನು ಪಡೆಯಲು ಕ್ರಮವಹಿಸುವುದು.

ಎ) ಔದ್ಯೋಗಿಕ ಖಾಯಿಲೆಗಳಿಗೆ ತುತ್ತಾಗಿರುವ ಕಾರ್ಮಿಕರು ಕಂಡುಬಂದಲ್ಲಿ ವಿವರವಾಗಿ ಪರಿಶೀಲಿಸಿ, ಅಗತ್ಯ ತಪಾಸಣೆಗಳನ್ನು ನಡೆಸಿ ಖಚಿತಪಡಿಸಿಕೊಂಡು ನಿಯಮಾನುಸಾರ ಕ್ರಮತೆಗೆದುಕೊಳ್ಳುವುದು. ಅಂತಹ ಕಾರ್ಮಿಕರನ್ನು ಕೆಲಸದ ಸ್ಥಳದಿಂದ ಬದಲಾಯಿಸುವ, ಕಾರ್ಮಿಕರಿಗೆ ಮತ್ತು ಆಡಳಿತ ವರ್ಗದವರಿಗೆ ಅರಿವು ಮೂಡಿಸುವ ಕುರಿತಂತೆ ಕ್ರಮವಹಿಸುವುದು ಹಾಗೂ ನಿಯಮಾನುಸಾರ ಕಾರ್ಮಿಕನಿಗೆ ಇಎಸ್‌ಐ ವತಿಯಿಂದ ಪರಿಹಾರ ಪಡೆಯಲು ಅನುವಾಗುವಂತೆ ವರದಿಯನ್ನು ಇಎಸ್‌ಐ ಇಲಾಖೆಗೆ ಲಿಖಿತವಾಗಿ ಸಲ್ಲಿಸಲು ಅಗತ್ಯ ಕ್ರಮತೆಗೆದುಕೊಳ್ಳುವುದು.

ಏ) ಕಾರ್ಖಾನೆಗಳ ವಿಭಾಗದ ಕ್ಷೇತ್ರಾಧಿಕಾರಿಗಳು ಅವರ ವ್ಯಾಪ್ತಿಯಲ್ಲಿರುವ ಅಪಾಯಕಾರಿ ಕಾರ್ಖಾನೆಗಳಿಗೆ ಕಾರ್ಖಾನೆಗಳ ಜಂಟಿ ನಿರ್ದೇಶಕರು (ವೈ)/ ಔದ್ಯೋಗಿಕ ಆರೋಗ್ಯ ತಜ್ಞರ ಜೊತೆ ಜಂಟಿ ಪರಿವೀಕ್ಷಣೆಯನ್ನು ನಡೆಸಿ ಮೇಲಿನ ಅಂಶಗಳ ಬಗ್ಗೆ ಕ್ರಮವಹಿಸುವುದು ಹಾಗೂ ಅಧಿಕಾರಿಗಳು ಸಲ್ಲಿಸುವ ದಿನಚರಿಯಲ್ಲಿ ಈ ಬಗ್ಗೆ ವಿವರ ನಮೂದಿಸುವುದು

ಐ) ಡಿಸೆಂಬರ್ 2020 ರೊಳಗಾಗಿ ಎಲ್ಲಾ ಅಪಾಯಕಾರಿ ಕಾರ್ಖಾನೆಗಳಿಗೆ ಭೇಟಿ ನೀಡಿ ಮೇಲೆ ತಿಳಿಸಿದಂತೆ ಕ್ರಮವಹಿಸಲು ಸೂಚಿಸಿದೆ.

*ಇಲಾಖೆಯ ವೈದ್ಯಕೀಯ ವಿಭಾಗದ ಅಧಿಕಾರಿಗಳಿಗೆ* ಕಾಯ್ದೆ ಮತ್ತು ನಿಯಮಗಳಲ್ಲಿ ನಿಗಧಿಪಡಿಸಲಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಚಾಚೂ ತಪ್ಪದೇ ಪಾಲಿಸಿ ಅಪಾಯಕಾರಿ ಕಾರ್ಯಚಟುವಟಿಕೆಗಳಲ್ಲಿ ನಿರತರಾಗಿರುವ

ಕಾರ್ಮಿಕರ ಆರೋಗ್ಯವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಇಲಾಖೆಯ ಧ್ಯೇಯೋದ್ದೇಶಗಳಿಗೆ ಚ್ಯುತಿಬಾರದಂತೆ ನಿರ್ವಹಿಸಲು ತಿಳಿಸಲಾಗಿದೆ ಹಾಗೂ ಕ್ಷೇತ್ರಾಧಿಕಾರಿಗಳು ಈ ನಿಟ್ಟಿನಲ್ಲಿ ತಮ್ಮ ಜವಾಬ್ದಾರಿಗಳನ್ನು ಅರಿತು ಅಗತ್ಯ ಸಹಕಾರ ನೀಡಿ ಒಂದು ತಂಡವಾಗಿ ಕಾರ್ಯನಿರ್ವಹಿಸಲು ತಿಳಿಸಿದೆ.

ನಿರ್ದೇಶಕರು (ಅ/ಪ್ರ)
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

**ಪ್ರತಿಯನ್ನು** : ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆರವರ ಅವಗಾಹನೆಗಾಗಿ ಸಲ್ಲಿಸಿದೆ ಮತ್ತು ಈ ನಿಟ್ಟಿನಲ್ಲಿ ತೆಗೆದುಕೊಂಡ ಕ್ರಮಗಳ ಬಗ್ಗೆ ಮಾಸಿಕ ವರದಿಯನ್ನು ಸಲ್ಲಿಸಲಾಗುವುದು.

**ಇವರಿಗೆ:**

1. ಕಾರ್ಖಾನೆಗಳು ಮತ್ತು ಬಾಯ್ಲರುಗಳ ಅಪರ ನಿರ್ದೇಶಕರು, ಬೆಂಗಳೂರು – ಈ ಕಾರ್ಯಕ್ಕೆ ಕೇಂದ್ರ ಕಛೇರಿಯಲ್ಲಿ ನೋಡಲ್ ಅಧಿಕಾರಿಯಾಗಿ ನಿಗಾವಹಿಸುವುದು.
2. ಕಾರ್ಖಾನೆಗಳ ಜಂಟಿ ನಿರ್ದೇಶಕರು 1/2, ಬೆಂಗಳೂರು/ಬಳ್ಳಾರಿ – ಅವರ ಕ್ಷೇತ್ರವ್ಯಾಪ್ತಿ ನೋಡಲ್ ಅಧಿಕಾರಿಯಾಗಿ ನಿಗಾ ವಹಿಸುವುದು ಮತ್ತು ದಿನಚರಿಯನ್ನು ಅನುಮೋದಿಸುವಾಗ ಪರಿಶೀಲಿಸುವುದು.
3. ಕಾರ್ಖಾನೆಗಳ ಜಂಟಿ ನಿರ್ದೇಶಕರು, (ವೈದ್ಯಕೀಯ) ಬೆಂಗಳೂರು.
4. ಕಾರ್ಖಾನೆಗಳ ಉಪ ನಿರ್ದೇಶಕರು, ಬೆಂಗಳೂರು ವಿಭಾಗ– 1 / 2 / 3 / 4/ 5, ತುಮಕೂರು/ಮೈಸೂರು–1/ಮಂಗಳೂರು–1 /ಬೆಳಗಾವಿ–1
5. ಔದ್ಯೋಗಿಕ ಆರೋಗ್ಯ ತಜ್ಞರು, ಬೆಂಗಳೂರು.
6. ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ಬೆಂಗಳೂರು ವಿಭಾಗ– 6 / 7 / 8 / 9 / 10, ಹುಬ್ಬಳ್ಳಿ ವಿಭಾಗ–1/ ಬಳ್ಳಾರಿ/ ಕಲ್ಬುರ್ಗಿ
7. ಕಾರ್ಖಾನೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ವಿಭಾಗ – 11/12/13/14/15/16/17/18/19/20/ರಾಯಚೂರು/ಶಿವಮೊಗ್ಗ /ಕೊಪ್ಪಳ/ಉಡುಪಿ/ದಾವಣಗೆರೆ/ಹಾಸನ/ಮಂಗಳೂರು ವಿಭಾಗ–2/ಹುಬ್ಬಳ್ಳಿ ವಿಭಾಗ–2/ಬೆಳಗಾವಿ ವಿಭಾಗ–2/ಮೈಸೂರು ವಿಭಾಗ–2